# ಕರ್ನಾಟಕ ಸರ್ಕಾರ
## ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ
## (ಜನಸ್ಪಂದನ ಕೋಶ)

ಸಂಖ್ಯೆ : ಸಿಆಸುಇ:18:ಆರ್‌ಟಿಐ:2011

3ನೇ ಮಹಡಿ, ಪೋಡಿಯಂ ಬ್ಲಾಕ್,
ವಿಶ್ವೇಶ್ವರಯ್ಯ ಗೋಪುರ,
ಬೆಂಗಳೂರು, ದಿನಾಂಕ : 03.02.2011.

## ಸುತ್ತೋಲೆ

ವಿಷಯ : ನಿರ್ದೇಶನಾಲಯಗಳಲ್ಲಿ / ಜಿಲ್ಲಾ ಕಛೇರಿಗಳಲ್ಲಿ / ನಿಗಮ ಮಂಡಳಿಗಳಲ್ಲಿ / ಜಿಲ್ಲಾ ಪಂಚಾಯತ್‌ಗಳಲ್ಲಿ ನೋಡಲ್ ಅಧಿಕಾರಿಗಳನ್ನು ನೇಮಿಸುವ ಬಗ್ಗೆ.

****

ಮಾಹಿತಿ ಹಕ್ಕು ಅಧಿನಿಯಮ 2005 ದಿನಾಂಕ: 15.06.2005 ರಿಂದ ಜಾರಿಗೆ ಬಂದಿರುವುದು ಸರಿಯಷ್ಟೆ. ಸದರಿ ಅಧಿನಿಯಮವು ಜಾರಿಗೆ ಬಂದ 120 ದಿನಗಳೊಳಗಾಗಿ ಎಲ್ಲಾ ಸಾರ್ವಜನಿಕ ಪ್ರಾಧಿಕಾರಗಳು ಕಲಂ 4(1)(ಎ), 4(1)(ಬಿ) ಮತ್ತು ಕಲಂ 5(1) ರಂತೆ ಕ್ರಮವಹಿಸಿ ಮಾಹಿತಿಯನ್ನು ಸೂಚನಾ ಫಲಕಗಳಲ್ಲಿ ಹಾಗೂ ವೆಬ್ ಸೈಟಿನಲ್ಲಿ ಪ್ರಕಟಿಸಬೇಕಾಗಿರುತ್ತದೆ.

ಮಾಹಿತಿ ಹಕ್ಕು ಅಧಿನಿಯಮ ಕಲಂ 4(1)(ಎ), 4(1)(ಬಿ) ಮತ್ತು ಕಲಂ 5(1) ಇವುಗಳನ್ನು ಕಡ್ಡಾಯವಾಗಿ ಪಾಲಿಸಬೇಕೆಂದು ಹೇಳಿದ್ದಾಗ್ಯೂ ಸಹ ಹಲವು ಸಾರ್ವಜನಿಕ ಪ್ರಾಧಿಕಾರಗಳು ಶಾಸನಾತ್ಮಕವಾದ ಬಾಧ್ಯತೆಗಳನ್ನು (Statutory obligation) ಪಾಲಿಸಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಶಾಸನಾತ್ಮಕವಾದ ಬಾಧ್ಯತೆಗಳನ್ನು ಸಾರ್ವಜನಿಕ ಪ್ರಾಧಿಕಾರಗಳು ಪಾಲಿಸದೇ ಇರುವುದನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿದೆ. ಆದುದರಿಂದ ಯಾವುದೇ ರೀತಿಯ ಉದಾಸೀನತೆ / ನಿರ್ಲಕ್ಷತೆಯನ್ನು ತೀವ್ರವಾಗಿ ಪರಿಗಣಿಸಲಾಗುವುದು ಎಂದು ತಿಳಿಸಿದೆ. ಮಾಹಿತಿ ಹಕ್ಕು ಅಧಿನಿಯಮದ ಪರಿಪೂರ್ಣ ಅನುಷ್ಠಾನಕ್ಕಾಗಿ ಪ್ರತಿಯೊಂದು ನಿರ್ದೇಶನಾಲಯದಲ್ಲಿ / ಜಿಲ್ಲಾ ಕಛೇರಿಗಳಲ್ಲಿ / ನಿಗಮ ಮಂಡಳಿಗಳಲ್ಲಿ / ಜಿಲ್ಲಾ ಪಂಚಾಯತ್‌ಗಳಲ್ಲಿ ಗ್ರೂಪ್-ಎ ದರ್ಜೆಯ (ಕಛೇರಿ ಮುಖ್ಯಸ್ಥರನ್ನು ಹೊರತುಪಡಿಸಿ ಗ್ರೂಪ್-ಎ ದರ್ಜೆಯ ಅಧಿಕಾರಿ ಆ ಕಛೇರಿಯಲ್ಲಿಲ್ಲದಿದ್ದಲ್ಲಿ ಗ್ರೂಪ್-ಬಿ ದರ್ಜೆಯ ಅಧಿಕಾರಿ) ಒಬ್ಬ ಹಿರಿಯ ಅಧಿಕಾರಿಯನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸುವಂತೆ ಸೂಚಿಸಲಾಗಿದೆ.

ಇಲಾಖೆಯ ಮಾಹಿತಿ ಹಕ್ಕು ಅಧಿನಿಯಮದ ಅನುಷ್ಠಾನದ ಹೊಣೆ ನೋಡಲ್ ಅಧಿಕಾರಿಯದ್ದಾಗಿರುತ್ತದೆ. ಕೆಳಕಂಡ ಕಾರ್ಯಗಳನ್ನು ನಿರ್ದಿಷ್ಟವಾಗಿ ನೋಡಲ್ ಅಧಿಕಾರಿಯು ನಿರ್ವಹಿಸಬೇಕಾಗಿದೆ:

(ಅ) ಇಲಾಖೆಯಲ್ಲಿರುವ ಎಲ್ಲಾ ಸಾರ್ವಜನಿಕ ಪ್ರಾಧಿಕಾರಗಳ/ ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಪಟ್ಟಿಯನ್ನು ನಿರ್ವಹಿಸುವಿಕೆಯನ್ನು / ಕಾಲಕಾಲಕ್ಕೆ up-date ಮಾಡುವಿಕೆಯನ್ನು ದೃಢಪಡಿಸಿಕೊಳ್ಳುವುದು .

--2

(ಆ) ಕರ್ನಾಟಕ ಮಾಹಿತಿ ಆಯೋಗಕ್ಕೆ ವಾರ್ಷಿಕ ವರದಿ ತಯಾರಿಸಲು ಬೇಕಾಗುವ ಎಲ್ಲಾ ಮಾಹಿತಿಯನ್ನು ಒದಗಿಸುವುದು:

(ಇ) ಮಾಹಿತಿ ಕೋರಿ ಇಲಾಖೆಯಲ್ಲಿ ಸ್ವೀಕೃತವಾಗುವ ಅರ್ಜಿಗಳ ವಿಲೇವಾರಿಯ ಮೇಲ್ವಿಚಾರಣೆ ಮಾಡುವುದು.

(ಈ) ಮೊದಲ ಮೇಲ್ಮನವಿ ಪ್ರಾಧಿಕಾರಿಗಳು ಮೇಲ್ಮನವಿಗಳ ವಿಚಾರಣೆಗಾಗಿ ದಿನ ನಿಗಧಿಪಡಿಸಿ 30 ದಿನಗಳೊಳಗಾಗಿ ಇತ್ಯರ್ಥಪಡಿಸುವಂತೆ ನೋಡಿಕೊಳ್ಳುವುದು.

ಈ ದಿಸೆಯಲ್ಲಿ ಕ್ರಮಕೈಗೊಂಡ ಬಗ್ಗೆ ಎಲ್ಲಾ ಇಲಾಖಾ ಮುಖ್ಯಸ್ಥರು, ಎಲ್ಲಾ ನಿಗಮ, ಮಂಡಳಿ ಮುಖ್ಯಸ್ಥರು, ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿಆಸುಇ (ಜನಸ್ಪಂದನ - ಮಾಹಿತಿ ಹಕ್ಕು), 20ನೇ ಮಹಡಿ, ವಿ.ವಿ. ಗೋಪುರ, ಬೆಂಗಳೂರು ಇವರಿಗೆ ದಿ: 20.02.2011ರ ರ ಒಳಗಾಗಿ ಮಾಹಿತಿ ನೀಡಲು ಕೋರಲಾಗಿದೆ.

(ಪ್ರಧಾನ ಕಾರ್ಯದರ್ಶಿಗಳು, ಸಿಆಸುಇ (ಜನಸ್ಪಂದನ)
ರವರಿಂದ ಅನುಮೋದಿಸಲ್ಪಟ್ಟಿದೆ)

ಲ. ವೆಂಕಟಗಿರಿಯಪ್ಪ 3/2/11
(ಲ. ವೆಂಕಟಗಿರಿಯಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿಗಳು
ಸಿಆಸುಇ (ಜನಸ್ಪಂದನ ಕೋಶ-ಮಾಹಿತಿ ಹಕ್ಕು)

ಗೆ,

1. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳುರವರಿಗೆ ಕಳುಹಿಸುತ್ತಾ, ತಮ್ಮ ಆಡಳಿತ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಇಲಾಖಾ/ ನಿಗಮ / ಮಂಡಳಿ ಮುಖ್ಯಸ್ಥರಿಗೆ ಈ ಬಗ್ಗೆ ಸೂಚನೆ ನೀಡಲು ಕೋರಲಾಗಿದೆ.
2. ಎಲ್ಲಾ ಜಿಲ್ಲಾಧಿಕಾರಿಗಳು
3. ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು,
4. ಎಲ್ಲಾ ಇಲಾಖಾ ಮುಖ್ಯಸ್ಥರು
5. ~~ಕಾರ್ಯದರ್ಶಿಗಳು, ಕರ್ನಾಟಕ ಮಾಹಿತಿ ಆಯೋಗ, ಬಹುಮಹಡಿ ಕಟ್ಟಡ~~, ಬೆಂಗಳೂರು ಇವರಿಗೆ ಮಾಹಿತಿಗಾಗಿ.

ಪ್ರತಿ :

1. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದದರ್ಶಿಯವರಿಗೆ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿಆಸುಇ (ಜನಸ್ಪಂದನ) ಇವರ ಆಪ್ತ ಶಾಖೆಗೆ.